ದಿನಾಂಕಃ 06-12-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ದಿನಾಂಕಃ 19-11-2021 ರಂದು ಆರೋಪಿ-1,3 ರಿಂದ 5 ರವರು ಚಾಸಾ-4 ಮತ್ತು 5 ರ ಸಮಕ್ಷಮ ಸ್ವಖುಷಿ ಹೇಳಿಕೆ ಆಧಾರದ ಮೇಲೆ ಮೃತದೇಹವನ್ನು ಕೃಷ್ಣಾ ನದಿಯಲ್ಲಿ ಎಸೆದ ಸ್ಥಳವನ್ನು ತೋರಿಸಿದ ಜಾಗೆಯಲ್ಲಿ ಮಧ್ಯಾಹ್ನ 2.45 ರಿಂದ 3.30 ಗಂಟೆವರೆಗೆ ಪಂಚನಾಮೆ ಜರುಗಿಸಿದ್ದೇನೆ. ಅದನ್ನು ಈಗಾಗಲೇ ನಿಪಿ-26 ಅಂತಾ ಗುರುತಿಸಲಾಗಿದ್ದು, ಸಹಿಯನ್ನು ನಿಪಿ-26(ಬಿ) ಅಂತಾ ಗುರುತಿಸಲಾಯಿತು. ಫೋಟೋಗಳನ್ನು ಈಗಾಗಲೇ ನಿಪಿ-27 ಅಂತಾ ಗುರುತಿಸಲಾಗಿದೆ.

ದಿನಾಂಕಃ 02-12-2021 ರಂದು ಚಾಸಾ-29 ಇವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಸಾ-11 ಇವರ ಕಲಂ 164 ಅಡಿ ಹೇಳಿಕೆ ಪಡೆದಿದ್ದೇನೆ. ಅದನ್ನು ನಿಪಿ-28 ಅಂತಾ ಗುರುತಿಸಲಾಗಿದೆ. ದಿನಾಂಕಃ 09-12-2021 ರಂದು ಚಾಸಾ-1,10 ರ ರಕ್ತದ ಮಾದರಿಗಳನ್ನು ನ್ಯಾಯಾಲಯದಲ್ಲಿ ಚಾಸಾ-36 ಪಡೆದುಕೊಂಡಿದ್ದಾರೆ ಹಾಗೂ ಅದೇ ದಿನ ಚಾಸಾ-32 ರ ಮೂಲಕ ಎಫ್.ಎಸ್.ಎಲ್ ಬೆಂಗಳೂರಿಗೆ ಕಳುಹಿಸಿದ್ದೇನೆ.

ಅವರು ದಿನಾಂಕಃ 11-12-2021 ರಂದು ಸ್ವೀಕೃತಿ ನೀಡಿದ್ದಾರೆ. ದಿನಾಂಕಃ 18-12-2021 ರಂದು ಗುನ್ನಾ ಸ್ಥಳದ ದಾಖಲಾತಿಗಳನ್ನು ಪಡೆದಿದ್ದೇನೆ. ದಿನಾಂಕಃ 23-12-2021 ರಂದು ಚಾಸಾ-32 ರ ಹೇಳಿಕೆ ಪಡೆದಿದ್ದೇನೆ. ದಿನಾಂಕಃ 11-01-2022 ರಂದು ಚಾಸಾ-33 ರಿಂದ ಗುನ್ನಾ ಸ್ಥಳದ ನಕ್ಷೆ ಪಡೆದಿದ್ದೇನೆ. ದಿನಾಂಕಃ 01-02-2022 ರಂದು ಗುನ್ನಾ ನಂ.98/2021 ರ ಮಿಸ್ಸಿಂಗ್ ಕಂಪ್ಲೆಂಟನ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಆರೋಪಿತರ ಸ್ವಮುಷಿ ಹೇಳಿಕೆಗಳನ್ನು ನಿಪಿ-39 ರಿಂದ 43 ಅಂತಾ, ಸಹಿಗಳನ್ನು ನಿಪಿ-39(ಎ) ರಿಂದ 43(ಎ) ಅಂತಾ, ಆರೋಪಿತರ ಸಹಿಗಳನ್ನು ನಿಪಿ-39(ಬಿ) ರಿಂದ 42(ಬಿ) ಅಂತಾ ಗುರುತಿಸಲಾಯಿತು. ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣೆ ದಾಖಲಿಸಿದ್ದೇನೆ.

ದಿನಾಂಕಃ 04-02-2022 ರಂದು ಘಟನೆ ದಿನ ವಿಧ್ಯುತ್ ಸಂಪರ್ಕದ ಕುರಿತು ಹೆಸ್ಕಾಂ ನವರಿಗೆ ಪತ್ರ ಬರೆದು ದಿನಾಂಕಃ 07-02-2022 ರಂದು ವರದಿ ಪಡೆದಿದ್ದೇನೆ. ಹೆಸ್ಕಾಂ ನವರನ್ನು ಸಾಕ್ಷಿಯನ್ನಾಗಿ ನಮೂದಿಸಿಲ್ಲ, ಏಕೆಂದರೆ ದೋಷಾರೋಪಣೆ ಪತ್ರ ದಾಖಲಿಸಿದ ನಂತರ ಮನವಿ ಸಲ್ಲಿಸಿ ಪಡೆದಿದ್ದೇನೆ. ಅದನ್ನು ನಿಪಿ-44 ಅಂತಾ, ಸಹಿಯನ್ನು ನಿಪಿ-44(ಎ) ಅಂತಾ ಗುರುತಿಸಲಾಯಿತು. ದಿನಾಂಕಃ 09-02-2022 ರಂದು ಅಗ್ನಿಶಾಮಕ ದವರಿಂದ ರಕ್ಷಣಾ ಕರೆ ವರದಿ ಪಡೆದಿದ್ದೇನೆ. ಟೋಲ್ ನಾಕಾದವರು ನೀಡಿದ ವಾಹನ ಸಂಚಾರ ವಿವರವನ್ನು ನಿಪಿ-46 ಅಂತಾ, ಸಹಿಯನ್ನು ನಿಪಿ-46(ಎ) ಅಂತಾ ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಎಸ್.ಪಿ.ಪಿ ರವರು ವೇಳೆ ಕೇಳಿದ್ದರಿಂದ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

06-12-2024

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.